Sri S. BANGARAPPA.—I prove to the hilt.

Sri D. DEVARAJ URS.—I am not yielding Sir.

(*Sri S. Bangarappa stood up.*)

Mr. DEPUTY SPEAKER.—If you want to speak, the Hon. Chief Minister must yield ; otherwise you cannot speak.

ಶ್ರೀ ವಾಟಾಳ್ ನಾಗರಾಜ್.—ಒಂದು ಕಡೆ ಪೋಲೀಸಿನವರು ಕಾನೂನಿನಂತೆ ಮಾಡುತ್ತಿದ್ದಾರೆಂದು ಹೇಳುತ್ತೀರಿ. ಅದರೆ ಇಲ್ಲಿ ಪೋಲೀಸು ರಾಜ್ಯ ಮಾಡಲು ಹೊರಟಿದ್ದಾರೆ ? ಈ ರೀತಿ ಪೋಲೀಸು ರಾಜ್ಯ ಏಕೆ ಮಾಡುತ್ತೀರಿ ?

Sri D. DEVARAJ URS.—I have already stated that in every case there is no magisterial enquiry. That has not been properly understood by the hon. members. You as the lawer know very well that in every case there must be an inquiry of this sort. In this particular case, we are going to order for a magisterial enquiry which is as good as an inquiry which they want. Therefore I cannot say anything beyond what has been stated by me. Here also I wish to categorically state that Government has no intention of shielding anybody, whether he is a Circle Inspector or any other person. I have time again stated here whenever we have come to know that an officer is at fault, I have no hesitation in suspending or even arresting that officer. Even officers have been arrested. Sir, I have placed before all the facts and I have told the house what the Government intends to do in this matter.

ಶ್ರೀ ವಾಟಾಳ್ ನಾಗರಾಜ್.—ನತ್ಯಕ್ಕೆ ದೂರವಾದ ಹೇಳಿಕೆ ಇಲ್ಲಿ ಕೊಡುತ್ತಾರೆ. ಇದಕ್ಕಾಗಿ ನಾವು ಈ ಸರಕಾರದ ಧೋರಣೆಯನ್ನು ಧಿಕ್ಕರಿಸುವುದಕ್ಕಾಗಿ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ಸಭೆಯಿಂದ ವಾಕ್‌ಔಟು ಮಾಡುತ್ತೇನೆ. ನಮಗೆ ಪೋಲೀಸರ ಸರಕಾರ ಬೇಕಾಗಿಲ್ಲ.

(*Sri Vatal Nagaraj staged a walk out at this state*)

Mr. DEPUTY SPEAKER.—Hon member Sri Sanadi may begin his speech.

ಶ್ರೀ ಬಿ. ಪುಟ್ಟಸ್ವಾಮಯ್ಯ. - ಸರಕಾರದವರು ಇಲ್ಲಿ ನತ್ಯಕ್ಕೆ ದೂರವಾದ ಹೇಳಿಕೆ ಕೊಡುತ್ತಿದ್ದಾರೆ, ದಯವಿಟ್ಟು ಎಲ್ಲ ವಿವರಗಳನ್ನೂ ಪೂರ್ತಿಯಾಗಿ ತಿಳಿದು ನಾಳೆ ದಿನ ಇಲ್ಲಿ ವಿವರ ಕೊಡುತ್ತೇನೆಂದು ಸರಕಾರದವರು ಭರವಸೆ ಕೊಡುತ್ತಾರೆಯೇ ? ಇದರ ಬಗ್ಗೆ ನಾವು ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಗೋಲಿಬಾರ್ ಆಗಿದೆ, ಮತ್ತು ಹೀಗೆ ಇಲ್ಲಿ ಗೋಲಬಾರು ಮಾಡಲು ಸರಕಾರದಿಂದ ಅಪ್ಪಣೆ ಕೊಡಲಾಗಿತ್ತೇ ಇಲ್ಲವೇ ಎನ್ನುವುದರ ಬಗ್ಗೆ ಇನ್ನೂ ಕೂಲಂಕಷವಾಗಿ ವಿಚಾರ ಮಾಡಿ ನಾಳೆಯಾದರೂ ನಮಗೆ ಇದರ ಬಗ್ಗೆ ಒಂದು ಸ್ಟೇಟ್‌ಮೆಂಟು ಕೊಡುವ ಭರವಸೆ ಕೊಡುತ್ತಾರೆಯೇ ? ಇಲ್ಲವಾದರೆ ಇದನ್ನು ನಾವು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗಿ ಬರುತ್ತದೆ ಮತ್ತು ಸತ್ಯಾಂಶವನ್ನು ಪುರೈಸಿಕೊಳ್ಳುತ್ತಿದ್ದಾರೆ ಇದಕ್ಕಾಗಿ ಸರಿಯಾದ ಹೇಳಿಕೆ ಕೊಡದೇ ಇದ್ದರೆ ಮುಂದೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

Mr. DEPUTY SPEAKER.—I have called hon. member Sri Sanadi to speak.

ಶ್ರೀ ಕಾಗೋಡು ತಿಮ್ಮಪ್ಪ.—ಪೊಲೀಸ್ ಸ್ಟೇಷನ್ ಕಾಗದದ ಆಧಾರದ ಮೇಲೆ ಹೇಳುತ್ತಿರುವುದರಿಂದ ನಮಗೆ ಇಲ್ಲಿ ಅನುಮಾನ ಬರುತ್ತಿದೆ.